



ಚಿತ್ರ: ವಿಕಿ ಕಾಮನ್ಸ್



ಮಿಶ್ರಿತ ನೇರಳೆ ಬಣ್ಣ. ಕೆಂಪು ಲಕ್ಕಿ ಮರದ ಹಂದರ ವಿರಳ. ಕೆಂಪು ಲಕ್ಕಿ ಕ್ಯಾನ್ಸರ್ ಹಾಗೂ ಅನೇಕ ಆಯುರ್ವೇದದ ಔಷಧಿಗೆ ಬಳಕೆಯಾಗುತ್ತದಂತೆ. ಎಲ್ಲಿಯೂ ಇದು ಕಾಣಸಿಗುತ್ತಿಲ್ಲ.

ಸೊರಬದಲ್ಲಿ ಹೊಸಪೇಟೆ ಹಕ್ಕಲು ಪ್ರದೇಶದಲ್ಲಿ ಹಿಂದೆ ನೋಡಿದ್ದಾಗಿ, ಊರಿಗೆ ಬಂದಾಗ ತೋರಿಸುವುದಾಗಿ ಮಂಜ ಚಿಕ್ಕಪ್ಪ ಹೇಳಿದ್ದರು. ಊರಿಗೆ ಹೋದಾಗ, ಸಾಗರದಲ್ಲಿ ನಡೆಯಲಿದ್ದ ಮದುವೆಗೆ ಗರಿಗರಿ ಷರಟು, ಕಚ್ಚೆ ಪಂಚೆಯುಟ್ಟು 75ರ ಆಸುಪಾಸಿನಲ್ಲಿ, ಮದುಮಗನ ಹುರುಪಿನಲ್ಲಿ ಹೊರಟಿದ್ದ ಮಂಜ ಚಿಕ್ಕಪ್ಪನನ್ನು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲವೆಂದು ಒಪ್ಪಿಸಿ, ಕೆಂಪು ಲಕ್ಕಿಯನ್ನು ಹುಡುಕಲು ಕರೆದುಕೊಂಡು ಹೊರಟರೆ, ಕೆಂಪು ಲಕ್ಕಿ ಇದ್ದ ಜಾಗದಲ್ಲಿ ಮನೆ ಕಟ್ಟಲಾಗಿತ್ತು. ಅಲ್ಲಿ ಸುಮಾರು ಜನರನ್ನು ವಿಚಾರಿಸಲಾಗಿ ಈಗ ಕೆಂಪು ಲಕ್ಕಿ ಎಲ್ಲಿಯೂ ಇಲ್ಲ ಎಂಬ ಉತ್ತರ ದೊರೆಯಿತು. ಬಂದ ದಾರಿಗೆ ಸುಂಕವಿಲ್ಲವೆಂದು ಕಾಲೆಳೆಯುತ್ತಾ ಬರುವಾಗ ಎದುರಿಗೆ ಸಾಗರದ ಕಡೆ ಹೊರಟಿದ್ದ ಬಸ್ಸು ಕಂಡಿತು.

ಕೈಬೀಸಿ ಟಣ್ಣನೆ ಜಿಂಕೆಯಂತೆ ಓಡಿ ಬಸ್ಸು ಹತ್ತಿದ ಚಿಕ್ಕಪ್ಪ, 'ಜೀವನದ ಐಷಾರಾಮ: ಸರಳ ಮನಸ್ಸು, ಸ್ವಸ್ಥ ದೇಹ' ಎಂಬ ಪ್ರಾತ್ಯಕ್ಷಿಕೆ ನೀಡಿದಂತೆನಿಸಿ, ಒಂದು ಕ್ಷಣ ಕಣ್ಮುಚ್ಚಿ ಕುಳಿತೆ. ಎಲ್ಲಿಯೂ ಸಿಗದ ಕೆಂಪು ಲಕ್ಕಿ ನನ್ನ ಮನಸ್ಸಿನಲ್ಲಿ ಯಾವ ಮೂಲೆಯಲ್ಲಿ ಅವಿತುಕೊಂಡಿತ್ತೋ ತಿಳಿಯದು. ಕಣ್ಮುಚ್ಚಿದೊಡನೆ ಥಟ್ಟನೆ ಕೆಲವು ವರ್ಷಗಳ ಹಿಂದೆ ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಳಿಯ ಬಳಿ ಕಿರಿದಾದ ರಸ್ತೆಯಲ್ಲಿ ಮನೆಯೊಂದರ ಮುಂದೆ ಕೆಂಪು ಲಕ್ಕಿಯನ್ನು ಹೋಲುವ ಮರವೊಂದನ್ನು ನೋಡಿದ್ದು ಮಸುಕಾಗಿ ನೆನಪಾಯಿತು.

ಬೆಂಗಳೂರಿಗೆ ಬಂದು ಮತ್ತೆ ಹುಡುಕಿ ಹೊರಟೆ. ಮೂರ್ನಾಲ್ಕು ರಸ್ತೆಗಳನ್ನು ಕಾಲ್ನಡಿಗೆಯಲ್ಲಿ ಸುತ್ತು ಹಾಕಿದಾಗ, 35 ಅಡಿಗೂ ಮೀರಿ ಎತ್ತರಕ್ಕೆ ಬೆಳೆದ ಕೆಂಪು ಲಕ್ಕಿಮರ ನಳನಳಿಸುವುದು ಕಂಡಿತು. ಆ ಮನೆಯವರು, ಪಕ್ಕದಲ್ಲಿದ್ದ ಛತ್ರವೊಂದರಲ್ಲಿ ಮದುವೆಗೆ ಇದರ ಸೊಪ್ಪು ಅದೃಷ್ಟಕರವೆಂದು ಜನ ಕಿತ್ತುಕೊಂಡು ಹೋಗುತ್ತಾರೆಂದೂ, ಮಂಗಳಕರ ಎಂಬ ನಂಬಿಕೆ ಇರುವುದರಿಂದ ಕಡಿಸಿಲ್ಲವೆಂದೂ ಹೇಳಿದರು. ಒಳಿತಾಗುವ ಸಂಭವನೀಯತೆ ಅತ್ಯಲ್ಪ ಪ್ರಮಾಣದಲ್ಲಿ ಇದ್ದಾಗಲೂ, ಒಳಿತೇ ಸಂಭವಿಸಿದರೆ ಅದೇ ಅದೃಷ್ಟವಲ್ಲವೇ? ಹಾಗಾಗಿ ಲಕ್ಕಿಯಲ್ಲಿ **Lucky** ಅಥವಾ ಅದೃಷ್ಟ ಇದೆ ಎನ್ನುವುದಕ್ಕಿಂತ ಮರೆಯಾಗಿದೆ ಎಂದುಕೊಂಡ ಕೆಂಪು ಲಕ್ಕಿ ಪುನಃ ದೊರೆತಿದ್ದೇ ಅದೃಷ್ಟ ಎಂದೆನಿಸಿತು.

ತಾಂತ್ರಿಕ ಸಹಾಯಕ ತಿಮ್ಮರಾಜುವಿನ ಸಹಾಯದಿಂದ ಬಿಳಿ ಲಕ್ಕಿ ಮರದಿಂದ ಮುರಿದು ತಂದು ನೆಟ್ಟ ಕಡ್ಡಿ ಚೆನ್ನಾಗಿ ಚಿಗುರಿರುವಂತೆಯೇ, ಸಹಾಯಕ ಮಧುವಿನ ಸಹಾಯದಿಂದ ಕೀಳಿಸಿ ತಂದು ನೆಟ್ಟ ಕೆಂಪು ಲಕ್ಕಿ ಕಡ್ಡಿಗಳೂ ಚಿಗುರಬಹುದೆಂಬ ನಿರೀಕ್ಷೆ ಇದೆ.

ನಮ್ಮ ಆಲೋಚನೆಗಳನ್ನು, ವ್ಯಾಖ್ಯಾನಗಳನ್ನು ಸರಳಗೊಳಿಸಿ, ಲಕ್ಕಿ ಸೇರಿದಂತೆ ಅಪರೂಪ ಎನಿಸುತ್ತಿರುವ ಮರಗಳನ್ನು ಮನೆ ಮುಂದೆ ರಸ್ತೆ ಬದಿಯಲ್ಲೋ ಅಥವಾ ಕಣ್ಣಳತೆಯ ಇನ್ನೊಂದು ಜಾಗದಲ್ಲೋ ಬೆಳೆಸಲು ಕಾರ್ಯಗತರಾದರೆ, ಆರ್ಕಿಮಿಡಿಸ್‌ನಂತೆ ಆತ್ಮವಿಶ್ವಾಸ, ಮಂಜ ಚಿಕ್ಕಪ್ಪನಂತೆ ಐಷಾರಾಮ ಪಡೆಯುವ ಅದೃಷ್ಟಕ್ಕೆ ಎಡೆಯಾಗಬಹುದು.

ಪ್ರತಿಕ್ರಿಯಿಸಿ: **feedback@sudha.co.in**